ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1137(1321)
ಸದಸ್ಯರ ಹೆಸರು : ಶ್ರೀ. ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 08/03/2022
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಕ್ರ.ಸ	ಪ್ರಶ್ನೆ	ಉತ್ತರ
ಅ)	ಪಟ್ಟಣ ಪಂಚಾಯತಿ/ಪುರಸಭೆಗಳಲ್ಲಿ ಉದ್ದಿಮೆ ಪರವಾನಿಗೆಯನ್ನು ನೀಡಲು ವಿಧಿಸಲಾಗುತ್ತಿರುವ ಶುಲ್ಕವೆಷ್ಟು; ಯಾವ ಆಧಾರದ ಮೇಲೆ ಶುಲ್ಕವನ್ನು ವಿಧಿಸಲಾಗುತ್ತಿದೆ;	ಕರ್ನಾಟಕ ಪೌರಸಭೆಗಳ ಕಾಯ್ದೆ, 1964ರ ಕಲಂ.256 ರಲ್ಲಿನ ಅಧಿಕಾರದಂತೆ ನಿಯಮದಲ್ಲಿ ವಿಧಿಸಿರುವ ಗರಿಷ್ಠ ಮಿತಿಗೊಳಪಟ್ಟು, ನಗರ ಸ್ಥಳೀಯ ಸಂಸ್ಥೆಯ ಕೌನ್ಸಿಲ್‌ನ ತೀರ್ಮಾನದಂತೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ನಿಗದಿಪಡಿಸಿ ವಿಧಿಸಲಾಗುತ್ತಿದೆ.
ಆ)	ಉದ್ದಿಮೆ ಪರವಾನಿಗೆಯನ್ನು ಪಡೆದ ನಂತರ ಪ್ರತಿ ವರ್ಷ ನವೀಕರಿಸುವ ಅಗತ್ಯವಿದೆಯೇ; ನವೀಕರಿಸಬೇಕಾದ್ದಲ್ಲಿ ಸಣ್ಣ ಮತ್ತು ಅತೀಸಣ್ಣ ಉದ್ದಿಮೆದಾರರಿಗೆ ಸದರಿ ಶುಲ್ಕ ಹೊರೆಯಾಗುವುದಿಲ್ಲವೇ;	ಕರ್ನಾಟಕ ಪೌರಸಭೆಗಳ ಕಾಯ್ದೆ, 1964ರ ಕಲಂ.256 ರಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉದ್ದಿಮೆ ನಡೆಸಲು ಅನುಮತಿ ಪರವಾನಿಗೆ ಪಡೆಯಬೇಕಾಗಿರುತ್ತದೆ ಹಾಗೂ ಕಲಂ.324 ರಂತೆ ಉಪವಿಧಿಗಳನ್ನು ರಚಿಸಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅವಕಾಶವಿರುತ್ತದೆ. ಉದ್ದಿಮೆ ಪರವಾನಿಗೆಯ ಕಾಲಾವಧಿಯನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964ರಲ್ಲಿ ನಿಗದಿಪಡಿಸಿರುವುದಿಲ್ಲ. ಆದ್ದರಿಂದ ಕಲಂ.324 ರಡಿ ಉದ್ದಿಮೆ ಪರವಾನಿಗೆಯ ಗರಿಷ್ಠ ಕಾಲಾವಧಿಯನ್ನು ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್‌ನಲ್ಲಿ ನಿರ್ಣಯಿಸಲಾಗುತ್ತದೆ.
ಇ)	ಈ ಹಿಂದೆ ಗ್ರಾಮ ಪಂಚಾಯತಿಗಳಲ್ಲಿ ನಿರಾಕ್ಷೇಪಣಾ ಪತ್ರ ಪಡೆದಿದ್ದಲ್ಲಿ, ಪರಿವರ್ತಿತವಾದ ಪಟ್ಟಣ ಪಂಚಾಯತಿ/ಪುರಸಭೆಗಳಲ್ಲಿ ಉದ್ದಿಮೆ ಪರವಾನಿಗೆ ಪಡೆಯುವ ಅವಶ್ಯಕತೆಯಿದೆಯೇ;	ಉದ್ದಿಮೆ ಪರವಾನಿಗೆಯ ಅವಧಿ ಮುಕ್ತಾಯವಾಗುವ ಮುನ್ನಾ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯಿಂದ ಉದ್ದಿಮೆದಾರರು ಪರವಾನಿಗೆಯನ್ನು ನವೀಕರಿಸಿಕೊಳ್ಳಬೇಕಾಗಿರುತ್ತದೆ.
ಈ)	ಮಾಲಿನ್ಯಕಾರಕವಲ್ಲದ ಸಣ್ಣ ಮತ್ತು ಅತೀಸಣ್ಣ ಕೈಗಾರಿಕೆಗಳಿಗೆ ಉದ್ದಿಮೆ ಪರವಾನಿಗೆಯಿಂದ	ಕೆ.ಎಂ.ಎ.ಕಾಯ್ದೆ 1964ರ ಶೆಡೂಲ್ XIII ರಲ್ಲಿ ಪಟ್ಟಿ ಮಾಡಿರುವ ಉದ್ದಿಮೆಗಳೆಲ್ಲವು ಸಂಬಂಧಿಸಿದ ನಗರ ಸ್ಥಳೀಯ

	ವಿನಾಯಿತಿ ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ವಿನಾಯಿತಿ ನೀಡಲಾಗುವುದು;	ಸಂಸ್ಥೆಯಿಂದ ಪರವಾನಿಗೆ ಪಡೆಯಬೇಕಾಗಿರುತ್ತದೆ. ಮಾಲಿನ್ಯಕಾರಕವಲ್ಲದ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಉದ್ದಿಮೆ ಪರವಾನಿಗೆಯಿಂದ ವಿನಾಯಿತಿಯಿರುವ ಬಗ್ಗೆ ಮುನಿಸಿಪಲ್ ಕಾಯ್ದೆಯಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಿರುವುದಿಲ್ಲ ಹಾಗೂ ಪ್ರಸ್ತುತ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.
ಉ)	ಪಟ್ಟಣ ಪಂಚಾಯತಿ/ಪುರಸಭೆಗಳ ವ್ಯಾಪ್ತಿಯಲ್ಲಿರುವ ಸಣ್ಣ ಮತ್ತು ಅತೀಸಣ್ಣ ಕೈಗಾರಿಕೆಗಳಿಗೆ ಉದ್ದಿಮೆ ಪರವಾನಿಗೆ ಮತ್ತು ತೆರಿಗೆ ಪಾವತಿಯಲ್ಲಿರುವ ವಿನಾಯಿತಿಗಳು ಮತ್ತು ಸೌಲಭ್ಯಗಳೇನು?	ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 51 ಶಾಸನ 2021, ಬೆಂಗಳೂರು, ದಿನಾಂಕ : 13-01-2022ರನ್ವಯ ವಸತಿ-ಉದ್ದೇಶಿತ ಕಟ್ಟಡಗಳ ಆಸ್ತಿ ತೆರಿಗೆಗಿಂತ ಕಡಿಮೆ ಇಲ್ಲದಂತೆ ಹಾಗೂ ವಾಣಿಜ್ಯ ಉದ್ದೇಶಿತ ಕಟ್ಟಡಗಳ ಆಸ್ತಿ ತೆರಿಗೆಯ ಶೇ.70 ಕ್ಕಿಂತ ಕಡಿಮೆಯಿಲ್ಲದಂತೆ ಎಲ್ಲಾ ಕೈಗಾರಿಕಾ ಆಸ್ತಿಗಳಿಗೆ ತೆರಿಗೆ ನಿರ್ಧರಣೆ ಮಾಡಲು ಮುನಿಸಿಪಲ್ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದೆ. ಸದರಿ ಸೌಲಭ್ಯದಿಂದ ಕೈಗಾರಿಕೆಗಳಿಗೆ ಆರ್ಥಿಕವಾಗಿ ಅನುಕೂಲವಾಗಿರುತ್ತದೆ.

ಸಂಖ್ಯೆ: ನಅಇ 74 ಜಿಇಎಲ್ 2022(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು